## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.

**C.C. 1634-22**

ಪಿ.ಡಬ್ಲ್ಯೂ- 5

ಸಿ.ಡಬ್ಲ್ಯೂ-16

ಸಾಕ್ಷಿದಾರರ ಹೆಸರು : ವೀರಪ್ಪ ಜಂಗಣ್ಣವರ

ತಂದೆ ಹೆಸರು : ಮಹಾರುದ್ರಪ್ಪ

ವಯಸ್ಸು : 59 ವರ್ಷ

ಉದ್ಯೋಗ : ಸಹಾಯಕ ಸಬ್ ಇನ್ಸಪೆಕ್ಟರ

ವಾಸಸ್ಥಳ : ಪೂರ್ವ ಸಂಚಾರಿ ಪೋಲಿಸ ಠಾಣೆ, ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಕಳೆದ 4 ವರ್ಷಗಳಿಂದ ಹುಬ್ಬಳ್ಳಿಯ ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 22.2.2022 ರಂದು ಮುಃ 9 ರಿಂದ ರಾತ್ರಿ 9 ಗಂಟೆವರೆಗೆ ನನ್ನನ್ನು ಸರ್ವೋದಯ ಸರ್ಕಲ್‌ನ ಸುತ್ತಮುತ್ತಲಿನ ರಸ್ತೆಗಳ ಸುಗಮ ಸಂಚಾರ ನೋಡಿಕೊಳ್ಳಲು ಪೆಟ್ರೋಲಿಂಗ ಕರ್ತವ್ಯ ಇತ್ತು. ಸಾಯಂಕಾಲ 7 ಗಂಟೆಗೆ ಸರ್ವೋದಯ ಸರ್ಕಲ್ ಬಳಿ ಒಬ್ಬ ಹೆಣ್ಣು ಮಗಳು ಹಿಂದೆ ಇನ್ನೊಬ್ಬ ಹೆಣ್ಣು ಮಗಳನ್ನು ಕೂಡ್ರಿಸಿಕೊಂಡು ದ್ವಿ ಚಕ್ರ ವಾಹನದ ಮೇಲೆ ಕೆ ಹೆಚ್ ಪಾಟೀಲ ರಸ್ತೆ ಕಡೆಯಿಂದ ಸರ್ವೋದಯ ಕಡೆಗೆ ಬರುತ್ತಿದ್ದಳು. ಅದೇ ಕಾಲಕ್ಕೆ ಅವಳ ಹಿಂದಿನಿಂದ ಒಂದು ಕಾರನ್ನು ಅದರ ಚಾಲಕ ಅತಿ ವೇಗವಾಗಿ ನಡೆಸಿಕೊಂಡು ಬಂದು ಆ ದ್ವಿ ಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ. ಆ ರಭಸಕ್ಕೆ ಹಿಂದೆ ಕುಳಿತ ಹೆಣ್ಣು ಮಗಳು ರಸ್ತೆ ಮೇಲೆ ಬಿದ್ದು ಚೀರಾಡುತ್ತಿದ್ದಳು. ಕೂಡಲೇ ನಾನು ಮತ್ತು ನನ್ನ ಸಹ ಸಿಬ್ಬಂದಿ ಚಾಸಾ-15 ಇವರು ಅವರ ರಕ್ಷಣೆಗೆ ಹೋದೆವು. ನಾವು ಹೋಗುವಷ್ಟರಲ್ಲಿ ಆ ಕಾರ್ ಚಾಲಕ ಪುನಃ ಅವಳ ಮೇಲೆ ಅಂದರೆ ಅವಳ ಹೊಟ್ಟೆ ಮೇಲೆ, ಕೈ ಕಾಲುಗಳ ಮೇಲೆ ಕಾರನ್ನು ಚಲಾಯಿಸಿಕೊಂಡು ಮುಂದೆ ಹೋದ. ಆ ಕಾರಿನ ನಂಬರನ್ನು ನೋಡಲಾಗಿ ಗ್ರೇ ಕಲರ್ ಇತ್ತು ಅದರ ನಂಬರ ಕೆಎ-25/8317 ಇತ್ತು.

ಆ ದ್ವಿ ಚಕ್ರ ನಂಬರ ನೋಡಲಾಗಿ ಅದು ಕೆಂಪು ಬಣ್ಣದಾಗಿತ್ತು. ಅದರ ನಂಃ ಕೆಎ-25 ಇ ಎನ್ 1250 ಇತ್ತು. ದ್ವಿ ಚಕ್ರದ ಸವಾರಳ ಹೆಸರು ಕೇಳಲಾಗಿ ತನ್ನ ಹೆಸರು ಪಾಯಲ್ ಜೈನ್ ಎಂದು ಹೇಳಿದಳು. ಹಿಂದೆ ಕುಳಿತ ಹೆಣ್ಣು ಮಗಳು ತನ್ನ ತಾಯಿ ನಿರ್ಮಲಾ ಎಂದು ತಿಳಿಸಿದಳು.

ಆ ಗಾಯಾಳುವನ್ನು ಉಪಚಾರಕ್ಕಾಗಿ ಸಿಟಿ ಕ್ಲಿನಿಕ್ ಆಸ್ಪತ್ರೆಗೆ ಕಳಿಸಿಕೊಟ್ಟೆವು. ಅಪಘಾತದ ಕಾರಣ ಸಂಚಾರ ದಟ್ಟಣೆಯಾಗಿತ್ತು. ಸಂಚಾರವನ್ನು ಸುಗಮಗೊಳಿಸಿ, ಬೈಕನ್ನು ರಸ್ತೆ ಬದಿ ಹಾಕಿದೆವು. ಆ ನಂತರ ಆಸ್ಪತ್ರೆಗೆ ಹೋದೆವು. ಅಲ್ಲಿ ಹೋಗಿ ವಿಚಾರಿಸಲಾಗಿ ಗಾಯಾಳು ಇವಳು ಸಾಯಂಕಾಲ 7.15 ಗಂಟೆಗೆ ಮರಣ ಹೊಂದಿದ್ದಾಳೆಂದು ತಿಳಿದುಬಂದಿತು. ಆಮೇಲೆ ಅಪಘಾತದ ಬಗ್ಗೆ ಶುಭಮ್ ಜೈನ್ ಇವರು ದೂರು ಕೊಟ್ಟಿದ್ದಾರೆಂದು ಗೊತ್ತಾಯಿತು. ಈ ಘಟನೆ ಬಗ್ಗೆ ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

ಅಪಘಾತದ ಕಾಲಕ್ಕೆ ಕಾರ್ ಚಾಲಕನನ್ನು ಸ್ವಲ್ಪ ನೋಡಿದ್ದೆವು, ಮತ್ತೆ ನೋಡಿದರೆ ಗುರುತಿಸುತ್ತೇವೆಂದು ತನಿಖಾಧಿಕಾರಿ ಮುಂದೆ ಹೇಳಿದ್ದೇವೆ. ಅಪಘಾತವಾದ ಮರುದಿನ ಅಂದರೆ ದಿಃ 23.2.2022 ರಂದು ಆರೋಪಿ ನಮ್ಮ ಠಾಣೆಗೆ ಹಾಜರಾಗಿದ್ದ, ನಾನು ಆತನನ್ನು ನೋಡಿ ಗುರುತಿಸಿರುತ್ತೇನೆ. ಆತನ ಹೆಸರು ವಿಚಾರಿಸಲಾಗಿ ರಾಜೇಶ ತಂದೆಃ ಮುನಿರತ್ನಮ್, ಸಾಃ ಮಹಾವೀರ ಕಾಲನಿ ಎಂದು ಹೇಳಿದ. ಅವರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾರೆ.

ಆತನ ಕಾರನ್ನು ಸಹ ನಮ್ಮ ತನಿಖಾಧಿಕಾರಿ ಠಾಣೆಗೆ ತರಿಸಿದ್ದರು, ಅದನ್ನು ಸಹ ನೋಡಿ ಗುರುತಿಸಿದ್ದೇನೆ. ಈಗ ನಿಪಿ.9 ರಲ್ಲಿರುವ ಕಾರನ್ನು ಮತ್ತು ಕೆಂಪು ಬಣ್ಣದ ಬೈಕನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದರ ಬಗ್ಗೆ ತನಿಖಾಧಿಕಾರಿ ಮುಂದೆ ಪುರವಣಿ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**C.C. 1634-22**

ಪಿ.ಡಬ್ಲ್ಯೂ- 6
ಸಿ.ಡಬ್ಲ್ಯೂ-17

ಸಾಕ್ಷಿದಾರರ ಹೆಸರು : ಬರ್ನಾಡ್ ಜೋಸೇಫ್

ತಂದೆ ಹೆಸರು : ಲೂರ್ದಸ್ವಾಮಿ

ವಯಸ್ಸು : 33 ವರ್ಷ

ಉದ್ಯೋಗ : ರೇಲ್ವೆ ನೌಕರ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಆರೋಪಿ ಪರಿಚಯವಿದೆ. ಕಾರ್ ನಂಃ ಕೆಎ-25 ಜೆಡ್ 8317 ಇದು ನನ್ನ ತಾಯಿ ಹೆಸರಿನಲ್ಲಿದೆ. ಸುಮಾರು 8- 10 ತಿಂಗಳ ಹಿಂದೆ ನಾನು ಮತ್ತು ಆರೋಪಿ ರೇಲ್ವೆ ಸ್ಟೇಶನ್‌ದಿಂದ ಕೇಶ್ವಾಪೂರ ಕಡೆಗೆ ಆ ಕಾರಿನಲ್ಲಿ ಹೊರಟಿದ್ದೆವು. ನಾನು ಕಾರ್ ಚಾಲಕನ ಪಕ್ಕದಲ್ಲಿ ಕುಳಿತಿದ್ದೆ. ಆರೋಪಿ ಕಾರ್ ನಡೆಸುತ್ತಿದ್ದ. ನಮ್ಮ ಮುಂದೆ ಒಬ್ಬ ಹೆಣ್ಣು ಮಗಳು ಬೈಕ್ ಮೇಲೆ ಬಲಬದಿಯಿಂದ ಬಂದು ತಿರುವು ತೆಗೆದುಕೊಳ್ಳುತ್ತಿದ್ದಳು. ಆಗ ನಮ್ಮ ಕಾರ್ ಟಚ್ ಆಗಿ ಕೆಳಗೆ ಬಿದ್ದಳು. ಆ ಬೈಕ್ ಹಿಂದೆ ಇದ್ದ ಹೆಣ್ಣು ಮಗಳ ಮೇಲೆ ನಮ್ಮ ಕಾರಿನ ಹಿಂದಿನ ಬಲ ಚಕ್ರ ಹಾಯ್ದು ಹೋಯಿತು. ಅಲ್ಲಿ ಸಾಕಷ್ಟು ಜನರು ಸೇರ ಹತ್ತಿದರು. ಆಗ ನಾವು ಅಲ್ಲಿಂದ ಹೊರಟು ಹೋದೆವು. ಮುಂದೆ ಅಂದರೆ ಮರುದಿನ ಆ ಗಾಯಗೊಂಡ ಹೆಣ್ಣು ಮಗಳು ಮರಣ ಹೊಂದಿದಳೆಂದು ಪೋಲಿಸರಿಂದ ಗೊತ್ತಾಯಿತು. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನಮ್ಮ ಕಾರ್ ನೋಡಿದರೆ ಗುರುತಿಸುತ್ತೇನೆ. ಆದರೆ ಬೈಕನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನಿಪಿ.9 ಭಾವಚಿತ್ರದಲ್ಲಿರುವ ಕಾರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರು ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.